ರಾಜ್ಯದ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಿಂದ ಸರ್ಕಾರವು ವಸೂಲಿ ಮಾಡಿದ ಪ್ರವೇಶ ಶುಲ್ಕದ ಬಗ್ಗೆ

೧೪೪೨. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಾಗಿಲು).— ಮಾನ್ಯ ನಿಯಂತ್ರಿತ ಮಾರುಕಟ್ಟೆ, ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ರಾಜ್ಯದ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಿಂದ ಸರ್ಕಾರವು ವಸೂಲಿ ಮಾಡಿದ ಪ್ರವೇಶ ಶುಲ್ಕ ಮತ್ತು ಮಾರುಕಟ್ಟೆ ಶುಲ್ಕದ ವಿವರವೆಷ್ಟು ?

ಆ) ವಾಹನಗಳು ಮುಷ್ಕರದ್ದಾಗಿ ಪ್ರವೇಶಿಸಲು ಅವಕಾಶವಿರುವುದರಿಂದ ಈ ಬಾಬಿನಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಪಕ್ಷದಲ್ಲಿ ಈ ಆರ್ಥಿಕ ನಷ್ಟವನ್ನು ತಡೆಯುವ ಸಲುವಾಗಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಕೆ. ಅಮರನಾಥ ಶೆಟ್ಟಿ (ನಿಯಂತ್ರಿತ ಮಾರುಕಟ್ಟೆ, ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).— ಅ) ರಾಜ್ಯದಲ್ಲಿನ ಮಾರುಕಟ್ಟೆಗಳ ಪ್ರಾಂಗಣಗಳೊಳಕ್ಕೆ ಪ್ರವೇಶಿಸುವ ವಾಹನಗಳಿಗೆ ಪ್ರವೇಶ ಶುಲ್ಕ (Entry Fee) ವಸೂಲಿ ಮಾಡಲು ಮಾರುಕಟ್ಟೆ ಕಾಯ್ದೆಯಲ್ಲಿ ಅವಕಾಶವಿಲ್ಲ. ಆದರೆ ಮಾರುಕಟ್ಟೆ ಪ್ರಾಂಗಣಗಳಿಂದ ಹುಟ್ಟುವಳಿಗಳನ್ನು ಸಾಗಿಸುವ ವಾಹನಗಳಿಗೆ ಸಮಿತಿಗಳಲ್ಲಿ ಉಪನಿಯಮಗಳಲ್ಲಿ ನಿಗಧಿಪಡಿಸಿದ ಪ್ರಕಾರ ವಾರ್ಷಿಕ ದೈನಂದಿನ ಲೈಸನ್ಸ್ ಶುಲ್ಕವನ್ನು ವಸೂಲಿ ಮಾಡಿ ಲೈಸನ್ಸ್ ಕೊಡಲಾಗುತ್ತಿದೆ.

ಮಾರುಕಟ್ಟೆ ಶುಲ್ಕವನ್ನು ಸರ್ಕಾರವು ವಸೂಲಿ ಮಾಡುವುದಿಲ್ಲ. ಇದನ್ನು ಮಾರುಕಟ್ಟೆ ಸಮಿತಿಗಳು ವಸೂಲಿ ಮಾಡುತ್ತವೆ. ಕಳೆದ ಎರಡು ವರ್ಷಗಳಲ್ಲಿ ವಸೂಲಾದ ಮಾರುಕಟ್ಟೆ ಶುಲ್ಕ ಮತ್ತು ಲೈಸನ್ಸ್ ಶುಲ್ಕದ ವಿವರ ಈ ರೀತಿ ಇದೆ.

ವರ್ಷ	ಮಾರುಕಟ್ಟೆ ಶುಲ್ಕ	ಲೈಸನ್ಸ್ ಶುಲ್ಕ	ಒಟ್ಟು
೧	೨	೩	೪
	(ರೂ. ಕೋಟಿಗಳಲ್ಲಿ)	(ರೂ. ಕೋಟಿಗಳಲ್ಲಿ)	(ರೂ. ಕೋಟಿಗಳಲ್ಲಿ)
೧೯೮೬-೮೭	೧೩.೦೯	೦.೪೩	೧೩.೫೨
೧೯೮೭-೮೮	೧೭.೨೭	೦.೪೬	೧೭.೭೩

ಆ) ಮಾರುಕಟ್ಟೆ ಪ್ರಾಂಗಣಗಳಲ್ಲಿ ಪ್ರವೇಶ ಶುಲ್ಕ ವಸೂಲಿ ಮಾಡಲು ಮಾರುಕಟ್ಟೆ ಕಾಯ್ದೆಯಲ್ಲಿ ಅವಕಾಶವಿಲ್ಲದಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.